**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1947/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಅಬ್ದುಲ್ ರಹೀಮ್ | ಪ್ರಾಸಾ -4 |
| ತಂದೆಯ ಹೆಸರು | : ಇಬ್ರಾಹಿಂ | ಚಾಸಾ-3 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಆಬ್ಯುಲೆನ್ಸ್ ಚಾಲಕ | ದಿನಾಂಕಃ24.07.2024 |
| ವಾಸಸ್ಥಳ | : ಮೂಡಿಗೆರೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇಲ್ಲ. ಚಾಸಾ-1 ರವರ ಪರಿಚಯವೂ ಸಹಾ ನನಗಿಲ್ಲ. ಚಾಸಾ-2 ರವರು ನನಗೆ ಗೊತ್ತು.

ಸಾಕ್ಷಿಯು ನಿಪಿ-5 ಮತ್ತು 9 ರ ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ ನಿಪಿ-3 ಮತ್ತು 6 ರ ಫೋಟೊಗಳಲ್ಲಿ ತಾವು ಇರುವುದಾಗಿ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-5(ಸಿ) ಮತ್ತು 9(ಬಿ) ಎಂದು ಗುರುತಿಸಲಾಯಿತು.

3 ವರ್ಷದ ಹಿಂದೆ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಎರಡು ಸಹಿ ಮತ್ತು ಮತ್ತೊಂದು ಸಹಿಯನ್ನು ಮುತ್ತಿಗೆಪುರದಲ್ಲಿ ಮಾಡಿದ್ದು, ನಿಪಿ-6 ರ ಫೋಟೊವನ್ನು ಮೂಡಿಗೆರೆ ಆಸ್ಪತ್ರೆಯಲ್ಲಿ, ನಿಪಿ-3 ರ ಫೋಟೋವನ್ನು ಮುತ್ತಿಗೆಪುರದಲ್ಲಿ ತೆಗೆಯಲಾಗಿದೆ. ಪೋಲಿಸರು ಶವ ಮಹಜರ್ ಮತ್ತು ಸ್ಥಳ ಮಹಜರ್ ಗೆ ಕರೆದು ನನ್ನ ಸಹಿಗಳನ್ನು ಪಡೆದು ಫೋಟೋಗಳನ್ನು ತೆಗೆದಿರುತ್ತಾರೆ. ಯಾವ ವಿಚಾರದ ಮಹಜರ್ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನಾದರು ವಶಕ್ಕೆ ಪಡೆದರ ನನಗೆ ನೆನಪಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:**

ಈಗ ಓದಿ ಹೇಳಿದಂತೆ ದಿ.13.08.2023 ರಂದು ಮೂಡಿಗೆರೆ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ವಿಚಾರ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1947/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಅಹಮ್ಮದ್ ಕುನ್ನಿ @ ಫಿಶ್ ಮೋನಿ | ಪ್ರಾಸಾ -3 |
| ತಂದೆಯ ಹೆಸರು | : ಬಡವಾ ಕುನ್ನಿ | ಚಾಸಾ-2 |
| ವಯಸ್ಸು | : 58 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಪಾರ | ದಿನಾಂಕಃ24.07.2024 |
| ವಾಸಸ್ಥಳ | : ಮೂಡಿಗೆರೆ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇಲ್ಲ. ಚಾಸಾ-1 ರವರ ಪರಿಚಯವೂ ಸಹಾ ನನಗಿಲ್ಲ. ಚಾಸಾ-3 ರವರು ನನಗೆ ಗೊತ್ತು.

ಸಾಕ್ಷಿಯು ದಿ.13.08.2023 ರ ಸ್ಥಳ ಮಹಜರ್, ಅಮಾನತ್ತು ಮಹಜರ್ ಮತ್ತು ನಿಪಿ-5 ರ ಶವ ಪಂಚನಾಮೆಯಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ನಿಪಿ-3, ನಿಪಿ-6 ರ ಫೋಟೋಗಳು ಮತ್ತು ಸ್ಥಳ ಪಂಚನಾಮೆ ಕಾಲದಲ್ಲಿ ತೆಗೆದ ಎರಡು ಫೋಟೋಗಳ ಬಗ್ಗೆ ಗುರುತಿಸುತ್ತಾರೆ. ಸ್ಥಳ ಮಹಜರ್ ನ್ನು ನಿಪಿ-8, ಅಮಾನತ್ತು ಮಹಜರ್ ನ್ನು ನಿಪಿ-9, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 9(ಎ), 5(ಬಿ), ಎರಡು ಫೋಟೋಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು.

3 ವರ್ಷದ ಹಿಂದೆ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಎರಡು ಸಹಿ ಮತ್ತು ಮತ್ತೊಂದು ಸಹಿಯನ್ನು ಮುತ್ತಿಗೆಪುರದಲ್ಲಿ ಮಾಡಿದ್ದು, ನಿಪಿ-6 ರ ಫೋಟೊವನ್ನು ಮೂಡಿಗೆರೆ ಆಸ್ಪತ್ರೆಯಲ್ಲಿ, ನಿಪಿ-3, 10 ಮತ್ತು 11 ರ ಫೋಟೋಗಳನ್ನು ಮುತ್ತಿಗೆಪುರದಲ್ಲಿ ತೆಗೆಯಲಾಗಿದೆ. ಪೋಲಿಸರು ಶವ ಮಹಜರ್ ಮತ್ತು ಸ್ಥಳ ಮಹಜರ್ ಗೆ ಕರೆದು ನನ್ನ ಸಹಿಗಳನ್ನು ಪಡೆದು ಫೋಟೋಗಳನ್ನು ತೆಗೆದಿರುತ್ತಾರೆ. ಯಾವ ವಿಚಾರದ ಮಹಜರ್ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನಾದರು ವಶಕ್ಕೆ ಪಡೆದರ ನನಗೆ ನೆನಪಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>**

ಈಗ ಓದಿ ಹೇಳಿದಂತೆ ದಿ.13.08.2023 ರಂದು ಮೂಡಿಗೆರೆ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ವಿಚಾರ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.